



ಭ. ಶ್ರೀ ಪಾರ್ಶ್ವನಾಥಸ್ವಾಮಿ

॥ ಸ ಪಾತು ಪಾರ್ಶ್ವನಾಥೋಽಸ್ಮಾನ್ ಯನ್ಮಹಿಮ್ನೈವಭೂಧರಃ ।
ನ್ಯಷೇಧಿ ಕೇವಲಂ ಭಕ್ತಿಭೋಗಿನೀಛತ್ರ ಧಾರಣಮ್ ॥



ಯಕ್ಷಿ ಶ್ರೀ ಪದ್ಮಾವತಿದೇವಿ ಅಮ್ಮನವರು

## ಹೊಂಬುಜ ಕ್ಷೇತ್ರ ಜೈನ ಮಠ ಪಟ್ಟಾಭಿಷೇಕ ಮಹೋತ್ಸವ

# ಶ್ರೀಗಳವರ ಭಾಷಣ




www.jainheritagecentres.com

ಪ್ರಕಾಶಕರು

**ಹೊಂಬುಜ ಜೈನ ಮಠ ಆಡಳಿತ ಮಂಡಳಿ**

ದಿನಾಂಕ 11-11-2011

# ವಿಚಾರಪಟ್ಟ ಕ್ಷುಲ್ಲಕ ಶ್ರೀ ಧರ್ಮಕೀರ್ತಿ ಸ್ವಾಮೀಜಿಯವರ ಪರಿಚಯ



| | | |
|---|---|---|
| ಜನ್ಮ ನಾಮ | : | ಪ್ರವೀಣ ಕುಮಾರ |
| ಜನ್ಮ ದಿನಾಂಕ | : | 18 ಮೇ 1982 |
| ಜನ್ಮ ಗ್ರಾಮ | : | ನಲಿಕೆ<br>ತುಂಬದೇವನಹಳ್ಳಿ-ಅಂಚೆ<br>ಬೇಲೂರು ತಾಲ್ಲೂಕು, ಹಾಸನ -ಜಿಲ್ಲೆ |
| ತಂದೆ | : | ಶ್ರೀ ಅನಂತ ರಾಜು |
| ತಾಯಿ | : | ಶ್ರೀಮತಿ ಪದ್ಮಾವತಿ |
| ಪ್ರಾಥಮಿಕ ಶಿಕ್ಷಣ | : | ಪ್ರಾಥಮಿಕ ಅಧ್ಯಯನ 1ರಿಂದ 7ರವರೆಗೆ<br>(1994-95) ಸ್ವಗ್ರಾಮದಲ್ಲಿ |
| ಹೈಸ್ಕೂಲ್ ಶಿಕ್ಷಣ | : | 8 ರಿಂದ 10 ರವರೆಗೆ(1995-1999)<br>ಶ್ರೀ ಗೊಮಟೇಶ್ವರ ವಿದ್ಯಾಪೀಠ<br>ಬ್ರಹ್ಮಚರ್ಯಾಶ್ರಮ, ಶ್ರವಣಬೆಳಗೊಳ |
| ಧಾರ್ಮಿಕ ಅಧ್ಯಯನ | : | ಬಾಲಬೋಧದಿಂದ,ಶ್ರಾವಕಾಚಾರದವರೆಗೆ<br>ಆಶ್ರಮದಲ್ಲಿ. |
| ದೀಕ್ಷೆ | : | 11 ಫೆಬ್ರವರಿ 2000, ಶ್ರೀ ಧವಲತೀರ್ಥಂ<br>ಶ್ರವಣಬೆಳಗೊಳ. |
| ದೀಕ್ಷಾ ಗುರುಗಳು | : | ಪರಮಪೂಜ್ಯ ಜಗದ್ಗುರು ಕರ್ಮಯೋಗಿ<br>ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ,<br>ಜೈನಮಠ ಶ್ರೀಕ್ಷೇತ್ರ ಶ್ರವಣಬೆಳಗೊಳ. |

www.jainheritagecentres.com



ನಮಸ್ತೆ ಪಾರ್ಶ್ವನಾಥಾಯ ಘಾತಿ ಕರ್ಮ ವಿನಾಶಿನೆ
ನಾಗರಾಜೇಂದ್ರ ವಿಸ್ತೀರ್ಣ ಫಣಾಲಾಂಕೃತ ಮೂರ್ತಯೇ ॥

ಶ್ರೀ ಪಾರ್ಶ್ವನಾಥ ಜಿನನಾಯಕ ರತ್ನಚೂಡಾ ।
ಪಾಶಾಂಕುಶಾಭಯ ಫಲಾಂಕಿತ ದೊಷ್ಷತುಷ್ಕಾ ॥
ಪದ್ಮಾನನಾ ತ್ರಿಣಯನ ತ್ರಿಪುಣಾವತಂಸಾ ।
ಪದ್ಮಾವತೀ ಜಯತು ಪದ್ಮಕೃತಾದಿವಾಸಾ ॥

**ಸದ್ಧರ್ಮಬಂಧುಗಳೇ**

ಆತ್ಮ ಪರಮಾತ್ಮನಾಗಿ ಮುಕ್ತಿಯನ್ನು ಹೊಂದುವ ಮಾರ್ಗವನ್ನು ತೀರ್ಥಂಕರರು ಉಪದೇಶಿಸಿರುತ್ತಾರೆ. ಆ ಮಾರ್ಗವು ರತ್ನತ್ರಯಗಳ ಸಾಧನೆಯ ಮೂಲಕ ಸಾಧ್ಯವಾಗುವುದೆಂದು ಜೈನಾಚಾರ್ಯರು ಹೇಳಿರುತ್ತಾರೆ. ರತ್ನತ್ರಯ ಸಿದ್ಧಿಗಾಗಿ ಉತ್ತಮ ಸಂಸ್ಕಾರಗಳನ್ನು ಹೊಂದುವುದು ಅಗತ್ಯ. ಮುನಿಗಳಾಗಿ ಸಂಪೂರ್ಣ ಸಂಯಮವನ್ನು ಪಾಲಿಸುತ್ತಾ ಆತ್ಮನಿಗೆ ಸಂಸ್ಕಾರ ಮಾಡಬಹುದಾದರೆ, ಶ್ರಾವಕಾವಸ್ಥೆಯಲ್ಲಿದ್ದುಕೊಂಡು ಅಣುರೂಪದಲ್ಲಿ ವ್ರತಾಚರಣೆ ಮಾಡುವುದರ ಜೊತೆಗೆ ಶುದ್ಧರಾಗಲು ಸಿದ್ದತೆ ಮಾಡಿಕೊಳ್ಳಬಹುದು.

ಧರ್ಮಾಚರಣೆಯಿಂದ ಮನುಷ್ಯನು ತನ್ನ ವ್ಯಕ್ತಿತ್ವವನ್ನು ಶುದ್ಧಗೊಳಿಸಿಕೊಳ್ಳಬಹುದು. ಧರ್ಮವೊಂದೇ ಲೌಕಿಕ ಮತ್ತು ಪಾರಲೌಕಿಕ ಸುಖವನ್ನು ನೀಡಬಲ್ಲದು. **"ಧರ್ಮ: ಸರ್ವ ಸುಖಾಕರೋ। ಹಿತ ಕರೋ ಧರ್ಮಾಯುಧಾತ್ಮಿನ್ನತೇ"** ॥ ಎಂದು ಆಚಾರ್ಯರು ಹೇಳಿರುವಂತೆ ಆತ್ಮ ಸುಖದ ಜೊತೆಗೆ ಮುಕ್ತಿ ಪಥದಲ್ಲಿ ನಡೆಯಲು ಧರ್ಮವು ಬೇಕು. ಧರ್ಮದ ಶರಣು ಹೊಂದಿದವರಿಗೆ ಸುಖ, ಶಾಂತಿ ಉಂಟಾಗುತ್ತದೆ.

www.jainheritagecentres.com

**"ಧರ್ಮೋ ರಕ್ಷತಿ ರಕ್ಷಿತ :"** ನಾವು ಧರ್ಮ ರಕ್ಷಣೆಯ ಸಂಕಲ್ಪ ಮಾಡಿದರೆ ಧರ್ಮವೇ ನಮ್ಮ ರಕ್ಷಣೆಗೆ ಬರುತ್ತದೆ. ಪರೋಪಕಾರಕ್ಕಿಂತ ಮಿಗಿಲಾದ ಧರ್ಮ ಮತ್ತೊಂದಿಲ್ಲಾ.

ಅಹಿಂಸಾ ಧರ್ಮ, ಜೀವ ದಯೇ, ತ್ಯಾಗ ಇತ್ಯಾದಿ ಪರ್ಯಾಯ ಶಬ್ದಗಳಲ್ಲಿ ಅದನ್ನು ಬಳಸಿದರೂ ಅಂತ:ಸತ್ವ ಒಂದೇ ಆಗಿದ್ದು, ಅದು "ಬದುಕು, ಬದುಕಲು ಬಿಡು" ಎಂಬುದೇ ಜೀವನ ಸೂತ್ರವಾಗಿದೆ. ಆತ್ಮಕಲ್ಯಾಣದ ಜೊತೆಗೆ ಸಮಾಜ ಕಲ್ಯಾಣ ಮಾಡುತ್ತಾ ಧರ್ಮ ಪ್ರಭಾವನೆಯೊಂದಿಗೆ ಭಕ್ತರ ಸಹಕಾರ ಪಡೆದು ಕ್ಷೇತ್ರ ಅಭಿವೃದ್ಧಿ ಮಾಡುವುದು ಮಠದ ಸ್ವಾಮೀಜಿಯವರ ಕರ್ತವ್ಯವಾಗಿದೆ. ಸಮಾಜದಲ್ಲಿ ಸಾಮರಸ್ಯ ಉಂಟು ಮಾಡಿ ಐಕ್ಯತೆಯನ್ನು ಕಾಪಾಡಿಕೊಂಡು ಹೋಗುವುದು ಇಂದಿನ ಅಗತ್ಯವಾಗಿದೆ.

ಇಂದು ನಾವೆಲ್ಲಾ ಸೇರಿರುವ ಹೊಂಬುಜ ಶ್ರೀ ಕ್ಷೇತ್ರವು ಭಾರತದ ಪ್ರಾಚೀನ ಜೈನ ಕ್ಷೇತ್ರಗಳಲ್ಲಿ ಒಂದಾಗಿದೆ. ಐತಿಹಾಸಿಕವಾಗಿ, ಪೌರಾಣಿಕವಾಗಿ ಹಾಗೂ ಸ್ಥಳ ಪುರಾಣಗಳ ಆಧಾರಗಳ ಮೇಲೆ ಅವಲೋಕಿಸಿದಾಗ, ಇಲ್ಲಿಯ ಗುರುಪೀಠವು ಪುರಾತನವಾಗಿರುವುದೆಂದು ತಿಳಿದು ಬರುತ್ತದೆ. ಆಚಾರ್ಯಶ್ರೀ ಕುಂದಕುಂದರ ಪರಂಪರೆಯ ಇಲ್ಲಿನ  ಪೂಜ್ಯರು ಈ ನಾಡಿಗೆ ಧಾರ್ಮಿಕ, ನೈತಿಕ ಹಾಗೂ ಮಾನವೀಯ ಮೌಲ್ಯಗಳ ಜೊತೆಗೆ ಉತ್ತಮ ಸಂಸ್ಕಾರಗಳನ್ನು ನೀಡುತ್ತಾ ಬಂದಿದ್ದು ಹೊಂಬುಜ ಪೀಠದಿಂದ ನಿರಂತರ ಧರ್ಮಪ್ರಭಾವನೆಯು ನಡೆದು ಬಂದಿದೆ.

ಹೊಂಬುಜ ಕ್ಷೇತ್ರವು ಸುಮಾರು 12 ಶತಮಾನಗಳಷ್ಟು ಸುದೀರ್ಘ ಇತಿಹಾಸವನ್ನು ಹೊಂದಿದೆ.**"ಸಾಂತಳಿಗೆ ಸಾಸಿರ"**ವೆಂಬ ನಾಡಿಗೆ ಒಂದು ಸಾವಿರ ವರ್ಷಗಳಷ್ಟು ಕಾಲ ರಾಜಧಾನಿಯಾಗಿ ಬೆಳಗಿದ ಕ್ಷೇತ್ರವಾಗಿದೆ. ಜಿನದತ್ತರಾಯನು ಇಲ್ಲಿಗೆ ಬಂದು ರಾಜಧಾನಿ ಮಾಡಿಕೊಂಡು ಜಗನ್ಮಾತೆ ಶ್ರೀ ಪದ್ಮಾವತೀ ದೇವಿಯ ಅನುಗ್ರಹಕ್ಕೆ ಪಾತ್ರನಾಗಿ ಸಮೃದ್ಧ ರಾಜ್ಯವನ್ನು ಕಟ್ಟಿದನು. ಹೊಂಬುಜ ಕ್ಷೇತ್ರದಲ್ಲಿ ನಿರಂತರ ಧರ್ಮ ಕಾರ್ಯಗಳನ್ನು ಮತ್ತು ಪರೋಪಕಾರ ಕಾರ್ಯಗಳನ್ನು ಸದಾ ಕಾಲ ಮುನ್ನಡೆಸುವ ಸಲುವಾಗಿ ಶ್ರೀ

ಗುರುಪೀಠವನ್ನು ಸ್ಥಾಪಿಸಿ ಸ್ವಸ್ತಿಶ್ರೀ ಸಿದ್ಧಾಂತಕೀರ್ತಿ ಭಟ್ಟಾರಕ ಪಟ್ಟಾಚಾರ್ಯರಿಗೆ ನಿವೇದಿಸಿಕೊಂಡಿರುವ ಕಾರಣ ಅನೇಕ ಆಚಾರ್ಯರು ಪಟ್ಟಾಚಾರ್ಯ ಪರಂಪರೆಯನ್ನು ಮುಂದುವರಿಸಿರುತ್ತಾರೆ.

ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು ಮತ್ತು ವಿಜಯನಗರದ ಅರಸುಗಳಿಂದ ಕೂಡ ಹೊಂಬುಜ ಕ್ಷೇತ್ರಕ್ಕೆ ಪ್ರೋತ್ಸಾಹ ಸಿಕ್ಕಿದೆ. ಈ ಪವಿತ್ರವಾದ ಕ್ಷೇತ್ರದಲ್ಲಿ  ಕಲೆ, ವಾಸ್ತು ಶಿಲ್ಪಯುಕ್ತ ಬಸದಿಗಳ ನಿರ್ಮಾಣವಾಗಿ ಭಕ್ತಿ ಕೇಂದ್ರವಾಗಿ ಕೂಡ ಬೆಳೆದಿದೆ.

ಜಿನಧರ್ಮ ವತ್ಸಲ ರಾಜಾ ಜಿನದತ್ತರಾಯನಿಂದ ಆರಾಧಿಸಲ್ಪಟ್ಟ ಭ. ಶ್ರೀ ಪಾರ್ಶ್ವನಾಥರ ಯಕ್ಷಿ ಶ್ರೀ ಪದ್ಮಾವತಿ ದೇವಿಯ ಮಹಾತ್ಮೆಯುಳ್ಳ ಲೊಕ್ಕಿ ಬನ ಸನ್ನಿಧಿ, ಪಾರ್ಶ್ವನಾಥ ಬಸದಿ, ಭ.ಬಾಹುಬಲಿ ಮೂರ್ತಿ, ಪಂಚಬಸ್ತಿ, ಗುರುಪೀಠ, ಮಠದ ಪೂರ್ವಾಚಾರ್ಯರ ನಿಷಿಧಿಗಳು, ಶಿಲಾ ಶಾಸನಗಳು, ಮುತ್ತಿನ ಕೆರೆ ಹಾಗೂ ಕುಮುದ್ವತೀ ನದಿಯ ಉಗಮ ಸ್ಥಳ ಮುಂತಾದ ಕುರುಹುಗಳಿರುವ ಐತಿಹಾಸಿಕ ಕ್ಷೇತ್ರವಾಗಿದೆ.

ಮಹಾನ್ ಜೈನಾಚಾರ್ಯರುಗಳು ಇಲ್ಲಿ ಸಾಹಿತ್ಯ ಸೃಷ್ಟಿಯನ್ನು ಮಾಡಿರುತ್ತಾರೆ. ಆಚಾರ್ಯಶ್ರೀ ದಿವಾಕರನಂದಿಯವರು ತತ್ವಾರ್ಥಸೂತ್ರಕ್ಕೆ ಕನ್ನಡ ವೃತ್ತಿಯನ್ನು ಬರೆದರೆ,ಶ್ರೀ ವಾದೀಭಸಿಂಹ ಮುನಿಗಳು ಕ್ಷತ್ರಚೂಡಾಮಣಿ ಹಾಗೂ ನಾಗವರ್ಮನು ಛಂದೋಂಬುದಿ ಕೃತಿಗಳ ರಚನೆ ಮಾಡಿರುತ್ತಾರೆ. ರತ್ನಾಕರ ವರ್ಣಿಗೆ ಅಶ್ರಯ ನೀಡಿ ಸಾಹಿತ್ಯ ರಚನೆಗೆ ಪ್ರೇರಣೆ ನೀಡಿದ ಗುರುಪೀಠವಿದು. ಹೀಗೆ ಹೊಂಬುಜ ಕ್ಷೇತ್ರದಲ್ಲಿ ಸರಸ್ವತಿಯ ಆರಾಧನೆಯು ನಿರಂತರ ನಡೆದು ಬಂದಿದೆ.

www.jainheritagecentres.com

ಕಳೆದ ಶತಮಾನದಲ್ಲಿ ಪರಮಪೂಜ್ಯ ಶ್ರೀ ಅರ್ಹದ್ದಾಸ ದೇವೇಂದ್ರಕೀರ್ತಿ ಸ್ವಾಮಿಗಳವರ ಬಹುಮುಖಿ ಕ್ಷೇತ್ರ ಸಮಾಜ ಸೇವೆಯಿಂದ  ಹೊಂಬುಜ ಕ್ಷೇತ್ರವು ಭಾರತದಲ್ಲಿ ಪ್ರಸಿದ್ಧಿ ಪಡೆದರೆ ಆ ನಂತರದಲ್ಲಿ ಪಟ್ಟಾಧೀಶರಾಗಿದ್ದ ಪರಮಪೂಜ್ಯ ಶ್ರೀ ಹೇಮರತ್ನಸಾಗರರ ಕಾಲದಲ್ಲಿ ವಿಶ್ವವಿಖ್ಯಾತವಾಯಿತು. ಪೂಜ್ಯ ಶ್ರೀ ಅರ್ಹದ್ದಾಸ ಸ್ವಾಮೀಜಿಯವರಿಂದ ಕ್ಷೇತ್ರದಲ್ಲಿ ಸ್ಥಾಪನೆಯಾದ ಕುಂದಕುಂದ ವಿದ್ಯಾಪೀಠದಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ಇಂದು ಸಮಾಜದ ಉನ್ನತ ಸ್ಥಾನಗಳನ್ನು ಹೊಂದಿರುತ್ತಾರೆ. ಅವರ ಕಾಲದಲ್ಲಿ ಅಮ್ಮನವರ ಬಸದಿಯ ನವೀಕರಣ, ಮುಂಭಾಗದ ಚಂದ್ರಶಾಲೆಯ ನಿರ್ಮಾಣ ಮುಂತಾದ ಕಾರ್ಯಗಳ ಮೂಲಕ ಹೊಂಬುಜ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ನಾಂದಿಯಾಗಿದೆ. ವೈನಾಡ್‌ನ ಶ್ರೀ ಜಿನಚಂದ್ರನ್ ಪರಿವಾರ ಮತ್ತು ಸಮಾಜದವರ ಕ್ಷೇತ್ರ ಸೇವೆಯನ್ನು ಎಂದೂ ಮರೆಯುವಂತಿಲ್ಲ.

ಸ್ವರ್ಗೀಯ ಪರಮಪೂಜ್ಯ ಶ್ರೀ ಹೇಮರತ್ನಸಾಗರ ದೇವೇಂದ್ರಕೀರ್ತಿ ಸ್ವಾಮಿಗಳು ಮಹಾನ್ ಮೇಧಾವಿಗಳು, ಚಿಂತನಶೀಲರು, ಆಗಮ ಜ್ಞಾನಿಗಳು ಹಾಗೂ ಪ್ರಖರ ವಾಗ್ಮಿಗಳಾಗಿದ್ದರು. ತತ್ತ್ವ ಪ್ರಚಾರದ ಜೊತೆಗೆ ಬಸದಿಗಳ ಜೀರ್ಣೋದ್ಧಾರ, ಪಂಚಕಲ್ಯಾಣ ಪ್ರತಿಷ್ಠೆಗಳ ನೇತೃತ್ವ, ಅಂತರಾಷ್ಟ್ರೀಯ ಮಟ್ಟದ ಸಮಾವೇಶಗಳ ಸಾನ್ನಿಧ್ಯ ನೀಡುವ ಮೂಲಕ ವಿಶ್ವಪ್ರಸಿದ್ಧಿಯನ್ನು ಗಳಿಸಿದ್ದು  ಇತಿಹಾಸ.

ಆಡಳಿತ ಮಂಡಳಿಯ ಎಲ್ಲಾ ಪದಾಧಿಕಾರಿಗಳ ಮತ್ತು ಸರ್ವ ಸದಸ್ಯರ ಒಮ್ಮತ ಅಭಿಪ್ರಾಯದಂತೆ ಯಕ್ಷಿ ಶ್ರೀ ಪದ್ಮಾವತಿಯ ವರಪ್ರಸಾದದಂತೆ ಪರಮ ಪವಿತ್ರ, ಅತಿಶಯವುಳ್ಳ, ಉಜ್ವಲ ಗುರು ಪರಂಪರೆಯನ್ನು ಹೊಂದಿರುವ, ಹೊಂಬುಜ ಕ್ಷೇತ್ರದ ಗುರುಪೀಠದ ಬಹುದೊಡ್ಡ ಜವಾಬ್ದಾರಿಯನ್ನು ಯಶಸ್ವಿಗೊಳಿಸುವುದೇ ನಮ್ಮ ಮುಖ್ಯ ಗುರಿಯಾಗಿದೆ. ಸಮಾಜ ಬಾಂಧವರ ಭಾವನೆಗೆ ಸ್ಪಂದಿಸುತ್ತಾ ಮುನ್ನಡೆಯಬೇಕಾಗಿದೆ.

ಕಳೆದ ಹನ್ನೊಂದು ವರ್ಷಗಳ ಹಿಂದೆ ಶ್ರೀ ಕ್ಷೇತ್ರ ಶ್ರವಣಬೆಳಗೊಳ ಮಠದ ಪರಮಪೂಜ್ಯ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ನಮಗೆ ವಿಚಾರಪಟ್ಟ ಕ್ಷುಲ್ಲಕ ದೀಕ್ಷೆಯನ್ನು ನೀಡುವ ಮೂಲಕ ಆತ್ಮಕಲ್ಯಾಣದ ಮಾರ್ಗದಲ್ಲಿ ನಡೆಯುವಂತೆ ಪ್ರೇರಣೆ ನೀಡಿರುತ್ತಾರೆ.

ಪಟ್ಟಾಭಿಷೇಕ ಮಹೋತ್ಸವ
ಶ್ರೀಗಳವರ ಭಾಷಣ

ಇಂದು ಕ್ಷೇತ್ರಾಭಿವೃದ್ಧಿ ಹಾಗೂ ಸಮಾಜ ಕಲ್ಯಾಣ ಮಾಡುವ ಹೊಣೆಗಾರಿಕೆ ಬಂದಿದೆ. ಇದನ್ನು ಸಮರ್ಥವಾಗಿ ನಿರ್ವಹಿಸಲು ಸರ್ವರ ಸಹಕಾರ ಅಗತ್ಯ.

ಪರಮಪೂಜ್ಯ ಸಿದ್ಧಾಂತ ಚಕ್ರವರ್ತಿ ಆಚಾರ್ಯಶ್ರೀ ವಿದ್ಯಾನಂದ ಮುನಿಮಹಾರಾಜರು ಮತ್ತು ಪ.ಪೂ. ಆಚಾರ್ಯಶ್ರೀ ವರ್ಧಮಾನ ಸಾಗರ ಮಹಾರಾಜರುಗಳ ಆಶೀರ್ವಾದ ಶುಭ ಸಂದೇಶಗಳಿಂದ ಇನ್ನೂ ಉತ್ಸಾಹ ಹೆಚ್ಚಿಸಿದೆ.

ಹೊಂಬುಜ ಗುರುಪೀಠದ ಮೂಲಕ ಮೊದಲಿಂದಲೂ ಧರ್ಮಪ್ರಭಾವನೆಯ ಕಾರ್ಯಗಳು ನಡೆಯುತ್ತಾ ಬಂದಿವೆ. ಕ್ಷೇತ್ರದ ಪ್ರಾಚೀನ ಸಂಸ್ಕೃತಿಯನ್ನು ಪರಂಪರೆಯನ್ನು ಉಳಿಸಿ, ಬೆಳೆಸುವುದು ನಮ್ಮ ಆದ್ಯ ಕರ್ತವ್ಯವೆಂದು ಭಾವಿಸಿರುತ್ತೇವೆ. ಕ್ಷೇತ್ರಕ್ಕೆ ಬರುವ ಭಕ್ತಾದಿಗಳಿಗೆ ಸಕಲ ಸೌಲಭ್ಯಗಳನ್ನು ನೀಡುವತ್ತಾ ಕಾರ್ಯ ಪ್ರವೃತ್ತರಾಗಬೇಕಾಗಿದೆ.

ಹೊಂಬುಜ ಕ್ಷೇತ್ರವು ಹಿಂದಿನಿಂದಲೂ ವಿದ್ಯಾ ಕೇಂದ್ರವಾಗಿದ್ದು ಕುಂದಕುಂದ ವಿದ್ಯಾಪೀಠದ ಮೂಲಕ ಗುರುಕುಲ ಶಿಕ್ಷಣ ಪದ್ಧತಿಯು ನಡೆದು ಬಂದಿದೆ. ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಆಧುನಿಕ ಶಿಕ್ಷಣದ ಜೊತೆಗೆ ಯುವ ಜನತೆಗೆ ಪರಿಚಯಿಸುವ ಕಾರ್ಯವನ್ನು  ಮುಂದುವರಿಸಬೇಕಾಗಿದೆ.

ಇಂದು ಎಲ್ಲಾ ಜೈನ ಮಠದ ಸ್ವಸ್ತಿಶ್ರೀ ಭಟ್ಟಾರಕ ಸ್ವಾಮೀಜಿಯವರು ಒಂದೇ ವೇದಿಕೆಯಲ್ಲಿ ಉಪಸ್ಥಿತರಿದ್ದು ನಮಗೆ ಶುಭ ಹಾರೈಸಿರುತ್ತಾರೆ. ಕಿರಿಯರಾದ ನಮಗೆ ನಿಮ್ಮೆಲ್ಲರ ಸ್ನೇಹಪೂರ್ವಕ ಸಹಕಾರ ಸದಾ ಇರಬೇಕೆಂದು ಅಪೇಕ್ಷಿಸುತ್ತೇವೆ.

www.jainheritagecentres.com

ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳೂ, ಕರ್ನಾಟಕ ರತ್ನ, ರಾಜರ್ಷಿ ಅಭಿನವ ಚಾಮುಂಡರಾಯ ಡಾ॥ ಡಿ.ವೀರೇಂದ್ರ ಹೆಗ್ಗಡೆಯವರು ತಮ್ಮದೇ ಆದ ಸ್ವತಂತ್ರ ವ್ಯಕ್ತಿತ್ವವನ್ನು ಹೊಂದಿರುವ ಮೇರು ಪುರುಷರು. ಅವರು ಧರ್ಮಸ್ಥಳದಲ್ಲಿ ನಡೆಸಿರುವ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಪ್ರಗತಿ ಇಡೀ ದೇಶಕ್ಕೆ ಅನುಕರಣೀಯವಾಗಿದ್ದು, ಮಠ ಮಾನ್ಯಗಳಿಗೂ ಸ್ಫೂರ್ತಿಯ ಚಿಲುಮೆಯಾಗಿರುತ್ತದೆ. ಅವರ ಸಲಹೆ-ಸಹಕಾರವನ್ನು ಸದಾಕಾಲ ನಾವು ಬಯಸುತ್ತೇವೆ.

ಹಾವೇರಿ ಸರಸಂಗಮಿ ಮನೆತನದವರು ಪರಂಪರಾಗತವಾಗಿ ಮಠಕ್ಕೆ, ಕ್ಷೇತ್ರಕ್ಕೆ ಮೊದಲಿನಿಂದಲೂ ನಿಷ್ಠೆಯಿಂದ ನಡೆದುಕೊಂಡು ಬಂದಿರುತ್ತಾರೆ.

ಬಳ್ಳಾಲ್ ಮನೆತನದವರು ಕೂಡ ಶ್ರೀ ಕ್ಷೇತ್ರಕ್ಕೆ ಮಾಡಿರುವ ಸೇವೆ ಸದಾ ಸ್ಮರಣೀಯ.

ಹೊಂಬುಜ ಆಡಳಿತ ಮಂಡಳಿಯ ಗೌರವಾಧ್ಯಕ್ಷರಾದ ಡಾ॥ ಡಿ.ವೀರೇಂದ್ರ ಹೆಗ್ಗಡೆಯವರು ಮತ್ತು ಕಾರ್ಯಾಧ್ಯಕ್ಷರುಗಳಾದ ಶ್ರೀ ಕೆ. ಜಯವರ್ಮರಾಜ ಬಳ್ಳಾಲ್ ಮತ್ತು ಶ್ರೀ ಡಿ.ಸುರೇಂದ್ರಕುಮಾರ್ ಹಾಗೂ ಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಎ.ಸಿ. ಪಾರ್ಶ್ವನಾಥ್ ಸೇರಿದಂತೆ ಎಲ್ಲಾ ಸರ್ವ ಸದಸ್ಯರ ಮತ್ತು ಸಮಾಜ ಬಾಂಧವರ ಆಶೋತ್ತರಗಳಿಗೆ ಸದಾ ಶ್ರಮಿಸುತ್ತಾ ಪ್ರಗತಿಯನ್ನು ಸಾಧಿಸುವ ದೃಢ ನಿಶ್ಚಯ ನಮ್ಮದಾಗಿದೆ.

ಹೊಂಬುಜದ ಜೈನ ಸಮಾಜದ ಮತ್ತು ಎಲ್ಲಾ ನಾಗರಿಕರ ಪ್ರೀತಿ-ವಿಶ್ವಾಸ ನಮಗೆ ಇರುತ್ತದೆ ಎಂದು ಭಾವಿಸಿರುತ್ತೇವೆ. ಕ್ಷೇತ್ರದ, ಊರಿನ ಸರ್ವತೋಮುಖ ಅಭಿವೃದ್ಧಿಗೆ ನಮ್ಮ ಸಹಕಾರ  ಸದಾ ಇರುತ್ತದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರಕಾರದ ಸಹಯೋಗವೆ ರಾಜಾಶ್ರಯವಾಗಿದ್ದು, ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಸರ್ಕಾರವು ಸಹಕರಿಸಬೇಕೆಂದು ಅಪೇಕ್ಷಿಸುತ್ತೇವೆ.

ಕ್ಷೇತ್ರಾಭಿವೃದ್ಧಿಗೆ ಸಮಸ್ತ ಶ್ರಾವಕ-ಶ್ರಾವಕಿಯರಿಗೆ ಸಹಕಾರ ಇರಲಿ.

"ನ ಧರ್ಮೋ ಧಾರ್ಮಿಕೈರ್ವಿನಾ" ಎಂಬಂತೆ ಕ್ಷೇತ್ರ ಅಭಿವೃದ್ಧಿ ಮಾಡುವ ಹಾಗೂ ಸಂರಕ್ಷಣೆಯ ಮಹಾನ್ ಕಾರ್ಯದಲ್ಲಿ ವಿದ್ವಾಂಸರ ಮತ್ತು ಸಮಾಜದ ಎಲ್ಲಾ ವರ್ಗಗಳ ಸಹಕಾರವು ಅವಶ್ಯವಾಗಿದೆ.

ಸಮೂಹ ಮಾಧ್ಯಮ ಪ್ರತಿನಿಧಿಗಳು ಕ್ಷೇತ್ರ ಪ್ರಚಾರಕ್ಕೆ ಹೊಸ ಆಯಾಮವನ್ನು ನೀಡುವಂತಾಗಲಿ.

ನಾವು ಹೊಂಬುಜ ಶ್ರೀ ಕ್ಷೇತ್ರ ಗುರುಪೀಠದ ಪಟ್ಟಾಭಿಷೇಕ ಮಹೋತ್ಸವದ ಈ ಶುಭ ಸಂದರ್ಭದಲ್ಲಿ ನಮ್ಮನ್ನು ನಾವು ಕ್ಷೇತ್ರ ಹಾಗೂ ಸಮಾಜ ಸೇವೆಗೆ ಸಮರ್ಪಿಸಿಕೊಳ್ಳುತ್ತಾ ಕೆಲವು ಶುಭ ಸಂಕಲ್ಪಗಳನ್ನು ಕಾರ್ಯಗತ ಮಾಡುವ ಉದ್ದೇಶ ಹೊಂದಿರುತ್ತೇವೆ.

ಶ್ರೀ ಗುರುಪೀಠದ ಈ ಹಿಂದಿನ ಶ್ರೀಗಳವರು ಪ್ರಾರಂಭಿಸಿರುವ ಯೋಜನೆಗಳನ್ನು ಮುಂದುವರೆಸುವುದರೊಡನೆ,

1. ಕ್ಷೇತ್ರದಲ್ಲಿ ಪೂಜಾ, ಉತ್ಸವಗಳ ವ್ಯವಸ್ಥೆಗಳನ್ನು ಪ್ರಾಚೀನ ಪರಂಪರೆಯಂತೆ ನೆರವೇರಿಸುವುದು.
2. ಭಕ್ತಾದಿಗಳಿಗೆ ಭೋಜನಾಲಯದ ಅಭಿವೃದ್ಧಿ
3. ತ್ಯಾಗಿಸೇವೆಗಾಗಿ ಪ್ರತ್ಯೇಕ ವ್ಯವಸ್ಥೆ
4. ಆಧುನಿಕ ರೀತಿಯ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮತ್ತು ಗುರುಕುಲ ಪದ್ಧತಿ ಶಿಕ್ಷಣ
5. ಆಧುನಿಕ ಸೌಲಭ್ಯವಿರುವ ವಸತಿ ಯೋಜನೆ
6. ಸಾರ್ವಜನಿಕ ಹಿತಾಸಕ್ತಿಯ ಯೋಜನೆಗಳಾದ ಆಸ್ಪತ್ರೆ, ಉದ್ಯೋಗ ತರಬೇತಿ ಕೇಂದ್ರಗಳ ಸ್ಥಾಪನೆ, ಊರಿನ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಅಭಿವೃದ್ಧಿ ಯೋಜನೆ
7. ನಾಡು–ನುಡಿಯ ಸಾಹಿತ್ಯ ಸೇವೆಗಾಗಿ ವಿಚಾರಗೋಷ್ಠಿ ಹಾಗೂ ಸಮಾವೇಶಗಳ ಆಯೋಜನೆ
8. ಗ್ರಂಥ ಪ್ರಕಾಶನ.
9. ಪ್ರಾಕೃತ ಮತ್ತು ಸಂಸ್ಕೃತ ಭಾಷೆಯ ಅಧ್ಯಯನ ಹಾಗೂ ಸಂಶೋಧನಗೆ ವ್ಯವಸ್ಥೆ.
10. ಕ್ಷೇತ್ರದ ಅಧೀನ ಕ್ಷೇತ್ರಗಳಾದ ಕುಂದಾದ್ರಿ, ವರಾಂಗ, ಹಟ್ಟಿಯಂಗಡಿಗಳ ಅಭಿವೃದ್ಧಿ ಹಾಗೂ ಶಿವಮೊಗ್ಗ ಮತ್ತು ಸಾಗರ ನಗರಗಳಲ್ಲಿರುವ ವಿದ್ಯಾರ್ಥಿನಿಲಯದ ಅಭಿವೃದ್ಧಿ.

www.jainheritagecentres.com

ಹೊಂಬುಜ ಜೈನ ಮಠದ ಗುರುಪೀಠದ ಗುರುತರ ಹೊಣೆಯನ್ನು ನಿರ್ಮಲ ಮನಸ್ಸಿನಿಂದ ಸ್ವೀಕರಿಸುತ್ತೇವೆ. ಉಜ್ವಲ ಭವಿಷ್ಯಕ್ಕಾಗಿ ಜಗತ್ಪೂಜ್ಯ ಶ್ರೀಪಾರ್ಶ್ವನಾಥ ಸ್ವಾಮಿ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇವೆ ಹಾಗೂ ಯಕ್ಷಿ ಮಾತೇ ಶ್ರೀಪದ್ಮಾವತೀ ದೇವಿಯ ಅನುಗ್ರಹವಿರಲಿ. ಅಹಿಂಸಾ ಧರ್ಮದ ಪ್ರಭಾವನೆಯಾಗಲಿ. ಸರ್ವರಿಗೂ ಸನ್ಮಂಗಳವುಂಟಾಗಲಿ ಎಂದು ಶುಭ ಹಾರೈಸುತ್ತೇವೆ.

**॥ ಇತಿ ಭದ್ರಂ ಭೂಯಾತ್ । ವರ್ಧತಾಂ ಜಿನ ಶಾಸನಂ ॥**

ಕ್ಷೇಮಂ ಸರ್ವ ಪ್ರಜಾನಾಂ ಪ್ರಭವತು । ಬಲವಾನ್ ಧಾರ್ಮಿಕೋ ಭೂಮಿಪಾಲಃ ।
ಕಾಲೆ ಕಾಲೇ ಚ ವೃಷ್ಟಿಂ ವಿತರತು ಮಘವಾ । ವ್ಯಾಧಯೋ ಯಾಂತು ನಾಶಂ ॥
ದುರ್ಭಿಕ್ಷಂ ಚೋರ ಮಾರೀ ಕ್ಷಣಮಪಿ । ಜಗತಾಮಾಸ್ಮಭೂಜ್ಜೀವಲೋಕೇ
ಜೈನೇಂದ್ರಂ ಧರ್ಮ ಚಕ್ರಂ ಪ್ರಭವತು । ಸತತಂ ಸರ್ವಸೌಖ್ಯ ಪ್ರದಾಯಿ ।
ಪ್ರಧ್ವಸ್ತ ಘಾತಿಕರ್ಮಣಃ ಕೇವಲ ಜ್ಞಾನಭಾಸ್ಕರಾಃ ।
ಕುರ್ವಂತು ಜಗತಃ ಶಾಂತಿಮ್ ವೃಷಭಾಧ್ಯ ಜಿನೇಶ್ವರಾಃ ॥



| | | |
|---|---|---|
| ದೀಕ್ಷೆ ಹೆಸರು | : | ವಿಚಾರಪಟ್ಟ ಕ್ಷುಲ್ಲಕ ಧರ್ಮಕೀರ್ತಿ ಸ್ವಾಮೀಜಿ |
| ವಿಶೇಶ ಅಧ್ಯಯನ | : | 2001–2002 ರಲ್ಲಿ<br>ಸ್ಯಾದ್ವಾದ ಮಹಾವಿದ್ಯಾಲಯ, ಕಾಶಿ–ಬನಾರಸ್ |
| ಎಂ.ಎ. (ಕನ್ನಡ) | : | ಕರ್ನಾಟಕ ಮುಕ್ತ ವಿಶ್ವ ವಿದ್ಯಾಲಯ–ಮೈಸೂರು<br>ವಿಷಯ–ಕನ್ನಡ ಸಾಹಿತ್ಯ (2004–05–ನೇ ವರ್ಷ<br>2005–2006–2ನೇ ವರ್ಷ) |
| ಪಿ.ಎಚ್.ಡಿ ನೊಂದಣಿ | : | 2008 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ<br>ವಿಷಯ : ಜಾನಪದೀಯ,<br>ಸಾಂಸ್ಕೃತಿಕ ಮತ್ತು ತೌಲನಿಕ ದೃಷ್ಟಿಯಿಂದ ಕನ್ನಡ<br>ಸಮ್ಯಕ್ತ್ವ ಕೌಮುದಿ ಕಾವ್ಯಗಳ ಅಧ್ಯಯನ |
| ಭಾಷಾ ಜ್ಞಾನ | : | ಕನ್ನಡ, ಸಂಸ್ಕೃತ, ಪ್ರಾಕೃತ, ಹಿಂದಿ, ಇಂಗ್ಲಿಷ್ |
| ತೀರ್ಥಯಾತ್ರೆ | : | ತೀರ್ಥಂಕರರ ನಿರ್ವಾಣ ಕ್ಷೇತ್ರಗಳಾದ<br>ಸಮ್ಮೇದ ಶಿಖರ್ಜಿ, ಚಂಪಾಪುರೀ, ಪಾವಾಪುರಿ,<br>ಗಿರಿನಾರ ದರ್ಶನ |
| ಗ್ರಂಥಸ್ವಾಧ್ಯಾಯ | : | ಧವಲ ಗ್ರಂಥಗಳು, ಗೊಮ್ಮಟಸಾರ–<br>ಗುಣ ಸ್ಥಾನ ಚರ್ಚೆ |
| ಸೇವೆ | : | ಶ್ರೀಕ್ಷೇತ್ರ ಶ್ರವಣಬೆಳಗೊಳಕ್ಕೆ ಬಂದಂತಹ ಪೂಜ್ಯ<br>ದಿಗಂಬರ ಆಚಾರ್ಯರು, ಮುನಿಗಳ ಹಾಗೂ<br>ಚತುರ್ವಿಧ ಸಂಘದ ಸ್ವಾಗತ, ವೈಯ್ಯಾವೃತ್ತಿ ಮತ್ತು<br>ವಿಹಾರ ಸಮಯದಲ್ಲಿ ಸೇವೆ. |

www.jainheritagecentres.com

ದಿನಾಂಕ 23.09.2011 ಶುಕ್ರವಾರದಂದು ಶ್ರೀಕ್ಷೇತ್ರ ಹೊಂಬುಜ ಜೈನಮಠದ ಉತ್ತರಾಧಿಕಾರಿಯಾಗಿ ಆಯ್ಕೆಯಾಗಿರುತ್ತಾರೆ.



ಶ್ರೀ ಹೊಂಬುಜ ಜೈನ ಮಠ

www.jainheritagecentres.com

dritidigitalpress@gmail.com | 080 41434943